ಬಾಯಲ್ಲಿ ಬರುವ ತತ್ವಪದಗಳ ರೂಪದ ರಚನೆಗಳು, ಸುಮನ ಗೀಚುವ ಸಾಲುಗಳು, ನಾರಣಪ್ಪ ಮೇಷ್ಟ್ರು ಬರೆಯುವ ಪದ್ಯ, ರೇಣುಕಾಳ ಹಾಡು – ಹೀಗೆ ಹಲವು ರೂಪದಲ್ಲಿ ಕಾದಂಬರಿಯುದ್ದಕ್ಕೂ ಬರುತ್ತವೆ. ಅವು ಈ ಕಾದಂಬರಿಯ ಪಾತ್ರದ ಒಳತುಮುಲಗಳನ್ನು ಸಶಕ್ತವಾಗಿ ಧ್ವನಿಸುವಂತೆಯೂ ಇವೆ. ಆದರೆ, ಕಾದಂಬರಿಕಾರರಿಗೆ ಅದರ ಮೇಲೆ ಪೂರ್ತಿ ನಂಬಿಕೆ ಇದ್ದಂತಿಲ್ಲ. ಹಾಗಾಗಿ ಪಾತ್ರಗಳ, ಅದರಲ್ಲಿಯೂ ಸುಮನಳ ವರ್ತಮಾನದ ಬದುಕನ್ನು ಚಿತ್ರಿಸುವಾಗ ಘಟನೆಗಳಿಗಿಂತ ಹೆಚ್ಚಾಗಿ ಅವಳ ಮನೋಸ್ವಗತಗಳೇ ಮುನ್ನಲೆಗೆ ಬರುತ್ತವೆ. ಕ್ರಿಯೆ ಮತ್ತದರಿಂದ ಸುಮನಳ ಮನಸಲ್ಲಿ ಹುಟ್ಟುವ ಭಾವನೆಗಳ ಸ್ವಗತ ಇದೊಂದು ಪ್ಯಾಟರ್ನ್ ಆಗಿ ಉದ್ದಕ್ಕೂ ಬಂದಿದೆ ಮತ್ತು ಈ ಅತಿಯಾದ ಸ್ವಗತವೇ ಕಾದಂಬರಿಯ ಸಹಜ ಹರಿವಿಗೆ ತಡೆಯಾಗಿದೆ; ಅದು ಹೊಳೆಯಿಸುವ ದರ್ಶನವನ್ನು ಮಂಕುಗೊಳಿಸಿದೆ. ಎಷ್ಟೋ ಸಲ ಆ ಸ್ವಗತದಲ್ಲಿ ಪಾತ್ರಗಳು ತಮ್ಮ ಸ್ವಂತ–ಸಹಜ ಧ್ವನಿಯನ್ನು ಕಳೆದುಕೊಂಡು ಕಾದಂಬರಿಕಾರನ ಮಾತುಗಳನ್ನು ಒಪ್ಪಿಸುತ್ತಿರುವಂತೆಯೂ ಭಾಸವಾಗುತ್ತವೆ.

ಉದಾಹರಣೆಗೆ, ಈ ಕೆಳಗಿನ ಸಾಲುಗಳನ್ನು ಗಮನಿಸಬಹುದು: 'ಸುಮನಳ ಕಂಗಳು ಒದ್ದೆಯಾಗತೊಡಗಿದವು. ಬಹುಶಃ ಅಂದು ಅಲ್ಲಾಬಕ್ಷಿ ಮತ್ತೆ ತನ್ನ ತಾಯಿಯನ್ನು ತಡೆಯದಿದ್ದರೆ ಅವಳು ತನ್ನನ್ನು ಸಾಯಿಸಿಬಿಡುತ್ತಿದ್ದಳೇನೋ! ಅಷ್ಟೊಂದು ಕೋಪವಿತ್ತು.' ತಾಯಿಯ ಕುರಿತಾದ ಈ ನೆನಪು ಸುಮನಳ ಮನಸಲ್ಲಿ ಸಹಜವಾಗಿ ಮೂಡುವಂಥದ್ದು. ಆದರೆ, ಲೇಖಕರು ಇಲ್ಲಿಗೇ ನಿಲ್ಲಿಸುವುದಿಲ್ಲ. ಅವರಿಗೆ ಈ ಘಟನೆಗೆ ಇರುವ ಸಾಮಾಜಿಕ, ರಾಜಕೀಯ ಆಯಾಮಗಳೆಲ್ಲ ಓದುಗರಿಗೆ ಅರಿವಾಗದೇ ಹೋಗಬಹುದೇನೋ ಎಂಬ ಆತಂಕ ಇದ್ದಂತಿದೆ. ಹಾಗಾಗಿ ಸುಮನಳ ಮೂಲಕ ಮತ್ತಷ್ಟು ಮಾತಾಡಿಸುತ್ತಾರೆ. 'ತಲೆಯಲ್ಲಿ ಪ್ರಶ್ನೆಗಳು ಏಳಲು ಅವಕಾಶ ಕೊಡದ ರೀತಿಯಲ್ಲಿ ಮೇಲೆರಗಿದರೆ ಮನುಷ್ಯನಾದವನು ಏನಾಗಿಬಿಡುತ್ತಾನೆ? ಕೆಲವು ವೇಳೆ ಹಾಗೇ ಆಗುತ್ತದೆ. ಆಕ್ರಮಣಕ್ಕೊಂದು ಉದ್ದೇಶವಿದ್ದರೂ ಅದಕ್ಕೆ ಒಳಗಾದವರ ಯೋಚನಾಶಕ್ತಿಯ ಸ್ವಾತಂತ್ರ್ಯವನ್ನು ಕಸಿದುಬಿಡುತ್ತದೆಯಲ್ಲವೇ? ಇಂತಹ ಆಕ್ರಮಣಗಳೇ ಪ್ರಭುತ್ವ ಅಥವ ಅಧಿಕಾರಶಾಹಿಗಳ ಮೂಲಭೂತ ಗುಣಗಳಾಗಿ ಹೊಮ್ಮುತ್ತವಲ್ಲವೇ?'' – ಇವು ಮುಂದಿನ ವಾಕ್ಯಗಳು. ಹೀಗೆ ಘಟನೆಗಿರುವ ಫಿಲಾಸಫಿಕಲ್, ಸೋಷಿಯಲ್, ಪೊಲಿಟಿಕಲ್ ಆಯಾಮಗಳನ್ನು ವಿಶ್ಲೇಷಿಸುವ ಸಾಲುಗಳು ಸುಮನಳ ಪಾತ್ರದ ಮನೋಸ್ವಗತದಲ್ಲಿ ವಿಪರೀತ ಎನ್ನುವಷ್ಟು ಬರುತ್ತವೆ. ಅವುಗಳಲ್ಲಿ ಬಹುತೇಕವಾದವು, ತನ್ನ ಭಾಷೆಯ ಧ್ವನಿಶಕ್ತಿಯ ಬಗೆಗಿನ ಅಪನಂಬಿಕೆಯಿಂದ ಹುಟ್ಟುವಂಥವು. ತಾನು ಹೇಳಹೊರಟಿರುವುದು ಓದುಗನಿಗೆ ಗೊತ್ತಾಗದೇ ಹೋದರೆ ಎಂಬ ಅನುಮಾನದಲ್ಲಿ ಹುಟ್ಟಿದಂಥವು. ರಸ್ತೆಯಲ್ಲಿ ಕಾಣುವ ಭಿಕಾರಿ ಹೇಳುವ ತತ್ವಪದಗಳ ಕುರಿತಾದ ಸುಮನಳ ಮನೋಸ್ವಗತವೂ ಅಂಥದ್ದೇ ಮಾದರಿಯವು. ಅವು ಈ ಕಾದಂಬರಿಯ ಧ್ವನಿಶಕ್ತಿಯನ್ನು, ದರ್ಶನಶಕ್ತಿಯನ್ನು ಕುಂಠಿತಗೊಳಿಸಿವೆ; ಮಂಕಾಗಿಸಿವೆ. ಹೇಗೆ ಯೋಚಿಸಬೇಕು ಎಂದು ನಮಗೆ ಕಾದಂಬರಿಕಾರ ನಿರ್ದೇಶಿಸುತ್ತಿದ್ದಾನೇನೋ ಎಂಬ ಭಾವ ಹುಟ್ಟಿಸಿ ಕಿರಿಕಿರಿಯನ್ನುಂಟುಮಾಡುತ್ತವೆ. ಅಂಥ ಅನಗತ್ಯ ಸ್ವಗತಗಳನ್ನು, ಅದೇ ರೀತಿಯ ಅನಗತ್ಯ ಫಿಲಾಸಫಿಕಲ್ ಮಾಡುವ ಕೃತಕ ಸಾಲುಗಳನ್ನು ತೆಗೆದಿದ್ದರೆ ಒಟ್ಟಾರೆ ಕಾದಂಬರಿಯ ಶಿಲ್ಪ ಇನ್ನಷ್ಟು ಸೊಗಸಾಗುತ್ತಿತ್ತು.

ಪದ್ಯಗಳಲ್ಲಿ, ಸಂಭಾಷಣೆಗಳಲ್ಲಿ ಬರುವ ತೆಲುಗನ್ನಡದ ಸೊಗಸು ಈ ಕಾದಂಬರಿಯ ಸತ್ವವನ್ನು ಹೆಚ್ಚಿಸಿದೆ. ಚಿಂತಾಮಣಿ–ಕೋಲಾರ ಭಾಗದ ತೆಲುಗು–ಕನ್ನಡ ಮಿಶ್ರಿತ ಭಾಷೆಯ ಪರಿಚಯ ಇಲ್ಲದವರಿಗೆ ಕೆಲವು ಕಡೆಗೆ ಅರ್ಥದ ತೊಡುಕು ಉಂಟಾಗುವುದೇನೋ ನಿಜ. ಆದರೆ, ತುಸು ಶ್ರಮವಹಿಸಿ ಆ ತೊಡಕನ್ನು ನಿವಾರಿಸಿಕೊಂಡು ನಡೆಸಬೇಕಾದ ಓದಿಗೆ ಖಂಡಿತ ಈ ಕಾದಂಬರಿ ಅರ್ಹವಾಗಿದೆ.

ಕಾದಂಬರಿ ಪ್ರಕಾರ ರಮೇಶಬಾಬು ಅವರಿಗೆ ಒಲಿದಿದೆ ಅಷ್ಟೇ ಅಲ್ಲ, ಅಭಿವ್ಯಕ್ತಿಯ ಆ ದಾರಿಯಲ್ಲಿ ಮಾಗುತ್ತ ಅವರು ಸಾಕಷ್ಟು ದೂರ ಸಾಗಿದ್ದಾರೆ ಕೂಡ. ಹಾಗಾಗಿಯೇ 'ಮಂಪರು' ಗಮನಿಸಲೇಬೇಕಾದ ಕಾದಂಬರಿ ಅಷ್ಟೇ ಅಲ್ಲ, ರಮೇಶಬಾಬು ಅವರ ಮುಂದಿನ ಪ್ರಯತ್ನಗಳ ಬಗ್ಗೆಯೂ ಭರವಸೆ ಹುಟ್ಟಿಸುವ ಕೃತಿ.

●